ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 02.01.2018ರಂದು ನಡೆದ ಸಭೆಯ ನಡವಳಿಗಳು

ವಿಷಯದ ಸಂಖ್ಯೆಃ ತೆಆಸ್ಥಾಸ/ 179 /2017-18

ಪ್ರಧಾನ ಅಭಿಯಂತರರರ ದಿನಾಂಕ: 30-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವ್ಯಾಪ್ತಿಯನ್ನು ಪೂರ್ವ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹದೇವಪುರ, ಯಲಹಂಕ ಜೋಮ್ಮನಹಳ್ಳಿ ವಲಯಗಳಾಗಿ ವಿಂಗಡಿಸಿದ್ದು ಎಲ್ಲಾ ವಲಯಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಮತ್ತು ಕೆಟ್ಟಿರುವ ದೀಪಗಳನ್ನು ಪುನಃ ಬೆಳಗಿಸಲು 2017-18ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0300ರ ಅಡಿಯಲ್ಲಿ ಒಟ್ಟು ಮೊತ್ತ ರೂ.2000.00 ಲಕ್ಷಗಳ ಮೊತ್ತವನ್ನು ಅನುವು ಮಾಡಲಾಗಿರುತ್ತದೆ. ಪಾಲಿಕೆಯ 08 ವಲಯದ ವಿದ್ಯುತ್ ಶಾಖೆಯ ಅಭಿಯಂತರರು ಕಂಡಿಕೆ (21) ರಿಂದ (50) ರವರೆಗೆ ನೀಡಿರುವ ವರದಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರಮ ಸಂಖ್ಯೆ	ವಲಯ	ಮೊತ್ತ ರೂ ಲಕ್ಷಗಳಲ್ಲಿ
1.	ಪೂರ್ವ	1169.31
2.	ಪಶ್ಚಿಮ	827.50
3.	ದಕ್ಷಿಣ	1339.05
4.	ಜೋಮ್ಮನಹಳ್ಳಿ	630.00
5.	ಮಹದೇವಪುರ	640.00
6.	ಯಲಹಂಕ	454.00
7.	ದಾಸರಹಳ್ಳಿ	218.00
8.	ರಾಜರಾಜೇಶ್ವರಿನಗರ	600.00
	ಒಟ್ಟು ಮೊತ್ತ ರೂ.	5928.06

ಪಾಲಿಕೆಯ 08 ವಲಯದ ಬೀದಿ ದೀಪದ ನಿರ್ವಹಣೆ ಕಾರ್ಯಗಳಿಗೆ ಒಟ್ಟು ಮೊತ್ತ ರೂ.5928.06 ಲಕ್ಷಗಳು ಅಗತ್ಯವಿರುತ್ತದೆ ಎಂದು ವಲಯ ವಿದ್ಯುತ್ ಅಭಿಯಂತರರು ವರದಿಯನ್ನು ಸಲ್ಲಿಸಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (16) ರಲ್ಲಿ ಸದರಿ ಕಾರ್ಯಕ್ಕೆ 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0300ರ ಅಡಿಯಲ್ಲಿ ರೂ.2000.00 ಲಕ್ಷಗಳ ಮೊತ್ತವು ಅನುವು ಮಾಡಲಾಗಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ-0300 (M&R to street lights replacement of burnt bulbs, etc) ರ ಅಡಿಯಲ್ಲಿ ರೂ.3928.01 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ: 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಪಿ-0300ರಲ್ಲಿ ಸಂಗ್ರಹಿಸಿರುವ ಅನುದಾನವು ಪಶ್ಚಿಮ ವಲಯಗಳಿಗೆ ಸಂಬಂಧಿಸಿದಂತೆ ಪೂರ್ವ ವಲಯಕ್ಕೆ ಮಾತ್ರ ಸೀಕುಬಣಗೆಯನ್ನು ಲಂಡರ್ ಕರೆದಿರುವುದನ್ನು ರದ್ದುಪಡಿಸಿ, ಸದರಿ ವೆಚ್ಚವನ್ನು ಪ್ರಸ್ತುತ ಚಿಧಿಗಳ ಪ್ರಕಾರ ಎಲ್ಲಾ 8 ವಲಯಗಳಿಗೆ ಅನುಪಾತದಲ್ಲಿ ಹಂಚಿಕೆ ಮಾಡಿ ಟೆಂಡರ್ ಕರೆಯಲು ಅನುಮತಿ ನೀಡಲಾಗಿದೆ. ಅದರಂತೆ ಟೆಂಡರ್ ಕರೆಯಲು ಅನುಮತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಶ್ರೀಯುತರುಗಳ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
01	ಮಹದೇವ ಎಂ	ಅಧ್ಯಕ್ಷರು	
02	ಎಂ. ಆನಂದ್	ಸದಸ್ಯರು	
03	ಉಮಾ. ಎನ್	ಸದಸ್ಯರು	
04	ಮಂಜುಳ ವಿಜಯಕುಮಾರ್	ಸದಸ್ಯರು	
05	ಅನ್ಸರ್ ಪಾಷಾ. ಎಸ್	ಸದಸ್ಯರು	
06	ಆಂಜನಪ್ಪ. ಎಂ	ಸದಸ್ಯರು	
07	ಕೆ.ಗಣೇಶ್ ರಾವ್ ಮಾನೆ	ಸದಸ್ಯರು	
08	ದಾಸೇಗೌಡ. ಸಿ	ಸದಸ್ಯರು	
09	ಶಿವಕುಮಾರ್. ಕೆ	ಸದಸ್ಯರು	
10	ಎಂ.ವೆಂಕಟೇಶ್ (ಸಂಗಾತಿ)	ಸದಸ್ಯರು	
11	ಹೆಚ್.ಸಿ. ನಾಗರತ್ನ ರಾಮಮೂರ್ತಿ	ಸದಸ್ಯರು	

Scanned by CamScanner